ಕಾರ್ಮಿಕ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವು

838 (1033) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಕಾರ್ಮಿಕರ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ; ಈ ಹಣವನ್ನು ಯಾವ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು;)

ಆ) ಈ ಸಂಬಂಧವಾಗಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಯಾವ ಯಾವ ಯೋಜನೆಗಳ ಬಗ್ಗೆ ಎಷ್ಟೆಷ್ಟು ಹಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು; ಈ ಪೈಕಿ ಎಷ್ಟು ಯೋಜನೆಗಳಿಗೆ ಅನುಮೋದನೆಯನ್ನು ನೀಡಿದೆ.

ಇ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಸುಸಜ್ಜಿತವಾದ ಇ.ಎಸ್.ಐ. ಆಸ್ಪತ್ರೆಗಳನ್ನು ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರ್ಮಿಸಲಾಗುವುದು;

ಈ) ಈ ಆಸ್ಪತ್ರೆಗಳನ್ನು ಹಿಂದುಳಿದ ಬೀದರ್ ಜಿಲ್ಲೆಯಲ್ಲಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುದಾನವನ್ನು ನೇರವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗುತ್ತಿದ್ದು, ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಲಾಗಿದೆ.

ಆ) ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ (ಎನ್‌ಸಿಎಲ್‌ಪಿ)ಯಡಿ, ಪ್ರಸ್ತಾವನೆಯನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. (ಪ್ರಸಕ್ತ ಸಾಲಿನಲ್ಲಿ ರೂ.30.27,275ಗಳ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ)

ಇ) ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ 100 ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಇ.ಎಸ್.ಐ ಆಸ್ಪತ್ರೆಯನ್ನು ಕಾರಾವಿ ನಿಗಮವು ನಿರ್ಮಿಸುತ್ತಿದೆ.

ಈ) ಕಾರಾವಿ ನಿಗಮದ ನಾರಮ್ಸ್ ಪ್ರಕಾರ 3,000 ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಸ್ಥಳಗಳಲ್ಲಿ ಕಾರಾವಿ ಚಿಕಿತ್ಸಾಲಯವನ್ನು 50,000ಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಸ್ಥಳಗಳಲ್ಲಿ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಕಾಶವಿದ್ದು, ಬೀದರ್ ಜಿಲ್ಲೆಯಲ್ಲಿ ಕಾರಾವಿ ನಿಗಮವು ನಮೀಕ್ಷೆ ನಡೆಸಿ 2700 ಕಾರ್ಮಿಕರನ್ನು ಅನುಬಂಧಿಸಬಹುದು ಎಂದು ವರದಿ ನೀಡಿರುವ ಕಾರಣ ಕಾರಾವಿ ಆಸ್ಪತ್ರೆಯನ್ನು ಬೀದರ್ ಜಿಲ್ಲೆಯಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

Annexure – I

2009-10

S.L No	District	Opening Balance	Budget Released	Budget utilized	Balance
1	Bangalore Urban	34,86,279	60,36,035	65,31,266	-
2	Bangalore Rural	-	NIL	-	-
3	Bagalkote	23,93,405	24,42,780	41,29,220	-
4	Ballary	96,840	17,97,200	9,10,463	-
5	Belgaum	-	NIL	-	-
6	Chitra durga	-	NIL	-	-
7	Davana gere	-	NIL	-	--
8	Gulbarga	-	63,10,600	-	-
9	Koppala	1,82,812	3,20,100	1,70,237	-
10	Mysore	-	NIL	-	-
11	Raichur	13,98,587	17,24,000	26,13,898 Intr:27568	5,37,626
12	Mandya	-	NIL	-	-
13	Bijapura	-	NIL	-	-
14	Dharwada	9,99,866 Intr. Earned & other deposits	10,65,871	3,36,852	6,96,008-15
15	Kolar	5,72,128	30,27,275	32,10,046	3,92,3357